ಸಾರ್ಥಕವೆನ್ನಿಸಿತು. ಇಡೀ ವೇದಕಾಲವೇ ಕಾಲಡಿ ಬಂದು ಸಂದಂತಾಯಿತು. ಇನ್ನು, ಜ್ಯೋತಿಷ್ಮತಿ ಮತ್ತು ರೈವತ ಅಂತೆಂಬ ಇವನ ತಂದೆತಾಯಿಯರ ಹೆಸರು ಕೇಳಿದ ಮೇಲಂತೂ, ಸಾಕ್ಷಾತ್ ಆರ್ಯಾವರ್ತವೇ ಮನೆ ತುಂಬಿತೋ ಎಂಬಂತಾಯಿತು. ಭಾಸವಾಯಿತು! ಸಮೀಪಾ ಇವನ ಚಿಕ್ಕಮ್ಮ ಅಂದರೆ ತಾಯಿಯ ತಂಗಿಯ ಹೆಸರು. ಯಜ್ಞದೇವ ಇವನ ಚಿಕ್ಕಪ್ಪ... ಸತ್ಯವತಿ ಇವನ ಅಜ್ಜಿ! ಹೀಗೆ ವ್ರತಕಥೆಗಳಲ್ಲಿ ಕೇಳಸಿಗುವ ಪುರಾಣಪಾತ್ರಗಳೆಲ್ಲ ನಮ್ಮ ಮನೆಯೊಳಗೆ ಅನುರಣಿಸುವುದೇನು ಸಾಮಾನ್ಯವೆ? ಈ ಹೆಸರುಗಳ ಮೂಲಕವೇ ನಮ್ಮ ಕಿವಿಗಳು ತೊಳೆತೊಳೆದು ಪಾವನವಾದವು!!

ತಪಸ್ಸು ತನ್ನ ಮೈಕಟ್ಟು ಮತ್ತು ಮುಖಾಯಗಳಿಂದ ಯಾವುದೋ ಬುಡಕಟ್ಟಿನ ಹುಡುಗನಂತನಿಸುತ್ತಾನೆ. ಎಣ್ಣೆಗಪ್ಪು ಬಣ್ಣ. ಪುಟ್ಟನೆ ಕಣ್ಣುಗಳು. ಚಪ್ಪಟೆ ಮೂಗನ್ನು ಆಕಾಶಕ್ಕೆ ತೆರೆಯುವ ದೊಡ್ಡ ದೊಡ್ಡನೆ ಹೊಳ್ಳೆಗಳು. ವರ್ಷಗಟ್ಟಲೆ ಹೊಟ್ಟೆಗಿಲ್ಲದೆ ಸೊರಗಿದಂತನಿಸುವ ಮೈಯಿ. ಬಾಯಿಬಿಟ್ಟರೆ ಮೋರೆಭರ್ತಿ ಆಚೀಚೆ ಹೊರಳುವಷ್ಟು ದೊಡ್ಡನೆ ಹಲ್ಲುಗಳು! ಇಂತಿಪ್ಪ ಆಕಾರಕ್ಕೆ ಈ ಬಗೆಯ ಸು'ಸಂಸ್ಕೃತ' ಹೆಸರೇ? ಆಶ್ಚರ್ಯವಾಗುವುದು. ಇನ್ನು, ಅವನ ಮನೆಯವರೆಲ್ಲರ ಮುಖಚರ್ಯೆಯೂ ಇಂಥದ್ದೇ. ಅವನೇ ತೋರಿಸಿದ ತನ್ನ ಕುಟುಂಬದ ಗ್ರೂಪ್‌ಫೋಟೊ ನೋಡಿದರಂತೂ, ಕಗ್ಗಾಡಿನಲ್ಲೆಲ್ಲೋ ಅಲೆದುಕೊಂಡಿದ್ದ ಮಂದಿ ಒಂದಾನೊಮ್ಮೆ ಎಲ್ಲಿಂದಲೋ ವಲಸೆಬಂದು, ಗಂಗೆಯಮುನೆಯರ ತಟಗಳಲ್ಲಿ ಹಬ್ಬಿ– ಈಶಾನ್ಯದ ಬ್ರಹ್ಮಪುತ್ರಾದವರೆಗೂ ಪಸರಿಕೊಂಡ ಸೋಕಾಲ್ಡ್ 'ಆರ್ಯ'ಸಂಕುಲದ ತಂತುಗಳೊಳಗೆ ಅದ್ದಿ ಹೊರಬಂದರೋ... ಅಂತನ್ನಿಸದಿರದು!

'ಅಲ್ಲಾರೀ... ಈ ಥರದ ಹೆಸರಿಟ್ಟುಕೊಂಡು ಮನೆಕೆಲಸಕ್ಕೆ ಬರೋದೆ? ವಿಚಿತ್ರ ಅಲ್ಲವಾ?!' ಒಮ್ಮೆ ನನ್ನ ಹೆಂಡತಿ ನನ್ನ ಮನಸ್ಸನ್ನೇ ಮಾತಾಗಿಸಿದಳು. 'ತಪ್ಪಸ್ಸಂತ ಕರೆಯೋಕೆ ನಮಗೇ ನಾಚುಗೆ ಆಗುತ್ತಲ್ಲವಾ?'

'ನಾಚುಗೆ ಎಂಥದ್ದೇ? ಮನೇಲಿ ಏನು ಅನಿವಾರ್ಯವೋ ಏನೋ? ಹಾಗಾಗಿ ಕೆಲಸ ಹುಡಕೊಂಡು ಬರುತಾರೆ... ಅದೂ ಅಲ್ಲದೆ, ಈ ಥರದ ಹೆಸರು ಹುಟ್ಟಿದ್ದೇ ನಾರ್ಥಿಂಡಿಯಾದಲ್ಲಲ್ಲವೇ? ಆರ್ಯಾವರ್ತ ಅಂದರೇನು ಸುಮ್ಮನೆಯೇ?' ಸಮಜಾಯಿಷಿ ಹೇಳಿದ್ದಾಯಿತು.

'ಆದರೂ ತಪಸ್ಸಂತ ಸಾತ್ವಿಕವಾದ ಹೆಸರಿಟ್ಟುಕೊಂಡು ಕಸ ಎತ್ತೋ ಕೆಲಸ ಮಾಡೋದು ಸರಿ ಅನಿಸಲ್ಲಾರೀ...'

'ಅಂದರೆ ಕಸ ಎತ್ತುವುದು ಅಸಾತ್ವಿಕ ಅಂತಲೇ?'

'ಹಂಗಲ್ಲಾರೀ... ಹೆಸರಿಗೂ ಅವನು ಮಾಡೋ ಕೆಲಸಕ್ಕೂ ಹೊಂದಾಣಿಕೆ ಇಲ್ಲ ಅಂತಂದೆ, ಅಷ್ಟೇ...'

'ಬ್ರಾಹ್ಮಣ ಹುಡುಗ ಇರಬೇಕು!' ಈ ನಡುವೆ ನನ್ನ ಅಮ್ಮ ಲೊಚಗುಟ್ಟಿದಳು. ಮಾತು, ಇದ್ದಕ್ಕಿದ್ದಂತೆ ಜಾತಿಕುರಿತಾಗಿ ಹೊರಳಿದ್ದು ಸರಿ ಅನಿಸಲಿಲ್ಲ. ಇಪ್ಪತ್ತೊಂದನೇ ಶತಮಾನದ 'ಸೆಕ್ಯುಲರಿಕೆ'ಗೆ ಏಕ್‌ದಮ್ ತದ್ವಿರುದ್ಧ ತಾನೇ?! ಶ್ಶ್... ಎಂದು ಗದರಿ ಅಮ್ಮನನ್ನು ಆ ಕ್ಷಣಕ್ಕೆ ಸುಮ್ಮನಾಗಿಸಿದರೂ, ತಪಸ್ಸು ನಮ್ಮ ಮನೆತುಂಬಿಕೊಂಡ ತಿಂಗಳೊಪ್ಪತ್ತಿಗೆಲ್ಲ ಫಜೀತಿಯೇ ಮೊದಲಾಯಿತು. 'ಬ್ರಾಹ್ಮಣನಾಗಿ ಹುಟ್ಟಿದ ನಿನಗಿಂತ ಅವನೇ ವಾಸಿ! ಬೆಳಿಗ್ಗೆ ಏಳುತ್ತಲೇ ಸ್ನಾನ ಮಾಡಿಕೊಂಡು ಬರುತಾನೆ... ದೇವರಿಗೆ ಕೈಮುಗಿದ ಮೇಲೆ, ಹೊರಗೆ ಹೋಗಿ